# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಯಲಹಂಕ ಉಪನಗರ ಉಪವಿಭಾಗ, ಬೆಂಗಳೂರು.**

**ದಿನಾಂಕ:15-10-2022 ರಂದು ಬೆಳಿಗ್ಗೆ 12.30 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ:05 ರಲ್ಲಿ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು.**

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ರಾಜೇಂದ್ರನಾಯಕ್ | ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ, ಯಲಹಂಕ |
| 2 | ಶ್ರೀ.ಮೋಹನ್.ಎನ್.ಡಿ. | ಸಹಾಯಕ ಅಭಿಯಂತರರು ಯ.ಉ.ಉ.ವಿ, ವಾರ್ಡ್ ನಂ:05 |
| 3 | ಶ್ರೀ.ಮಂಜುನಾಥ್ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| 4 | ಶ್ರೀ.ಭಾರ್ಗವ್.ಪಿ.ಎನ್ | ಹಿರಿಯ ಆರೋಗ್ಯ ಪರಿವಿಕ್ಷಕರು ಅಟ್ಟೂರು, ವಾರ್ಡ್ ನಂ:04, |
| 5 | ಶ್ರೀ.ಎಂ.ನಾರಾಯಣಪ್ಪ | ಸ.ಕಾ.ಅ, ಎಸ್.ಡಬ್ಲ್ಯು.ಡಿ |
| 6 | ಶ್ರೀ.ಮಲ್ಯಾದ್ರಿ | ಹಾರ್ಟಿಕಲ್ಚರ್ ಇನ್ಸ್‌ಪೆಕ್ಟರ್ |
| 7 | ಶ್ರೀ.ಶೇಖರ್ | ಅರಣ್ಯ ಇಲಾಖೆ |
| 8 | ಶ್ರೀ.ಭಾನುಪ್ರಕಾಶ್ | ಎ.ಎ.ಪಿ.ಪ್ರೆಸಿಡೆಂಟ್ |
| 9 | ಶ್ರೀ.ಎ.ಎನ್.ಮಧುಸೂಧನ್ | ಸ್ಟ್ರೀಟ್ ಲೈಟ್ ಗುತ್ತಿಗೆದಾರರು |
| 10 | ಶ್ರೀ.ಭಾಸ್ಕರ್.ಬಿ.ಎಸ್ | ಸಾರ್ವಜನಿಕರು |
| 11 | ಶ್ರೀ.ಆರ್.ಜಿ.ಭಟ್ | ಸರ್ಕಾರಿ ನೌಕರರು (ನಿವೃತ್ತಿ) |
| 12 | ಶ್ರೀಮತಿ.ಸುಹಾಸಿನಿ | ಸಾರ್ವಜನಿಕರು |
| 13 | ಶ್ರೀ.ಆರ್.ಕ್ಯು.ಪುಟ್ಟಸ್ವಾಮಿ | ವಾರ್ಡ್ ಕಮಿಟಿ ಮೆಂಬರ್ |

ದಿನಾಂಕ:15-10-2022 ರಂದು ಬೆಳಿಗ್ಗೆ 12.30 ಗಂಟೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ಕಛೇರಿಯಲ್ಲಿ ವಾರ್ಡ್ ನಂ:05 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಾರ್ಡ್ ವ್ಯಾಪ್ತಿಗೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ನಿವಾಸಿಗಳ ಕ್ಷೇಮಾಭಿವೃದ್ದಿ ಸಂಘದ ಪ್ರತಿನಿಧಿಗಳೊಂದಿಗೆ ನಡೆಸಿದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

| ಕ್ರ.ಸಂ | **ವಿಷಯ ಸೂಚಿ** | **ನಿರ್ಣಯ** | ಕ್ರಮತೆಗೆದು ಕೊಳ್ಳಬೇಕಾಗಿರುವ ಅಧಿಕಾರಿ / ಇಲಾಖೆ |
|---|---|---|---|
| 1 | ಬಿ.ಎಂ.ಟಿ.ಸಿ ಬಸ್‌ನಲ್ಲಿ ಬಹಳ ಕಳ್ಳತನವಾಗುತ್ತಿರುವ ಬಗ್ಗೆ ತಿಳಿಸಿದರು ಹಾಗೂ ಯಾವುದೇ ಕ್ರಮಕೈಗೊಳ್ಳದೇ ಇರವ ಬಗ್ಗೆ ತಿಳಿಸಿದರು. | ಬಿ.ಎಂ.ಟಿ.ಸಿ. ಬಸ್‌ನಲ್ಲಿ ಕಳ್ಳತನ ಮಾಡುತ್ತಿರುವವರ ಫೋಟೋಗಳನ್ನು ಬಸ್ಸಿನಲ್ಲಿ ಮತ್ತು ಬಸ್‌ನಿಲ್ದಾಣದಲ್ಲಿ ಅಂಟಿಸಲು ಪೋಲೀಸ್ ರವರಿಗೆ ತಿಳಿಸಲು ಸಭೆಯಲ್ಲಿ ಸೂಚಿಸಲಾಗಿದೆ. | ಬಿ.ಎಂ.ಟಿ.ಸಿ |

| | | | |
|---|---|---|---|
| 2 | ಬಸವಲಿಂಗಪ್ಪ ಪಾರ್ಕ್‌ನಲ್ಲಿ ಮಳೆ ಬಂದಾಗ ನೀರು ನಿಲ್ಲುತ್ತಿರುವುದರಿಂದ ಜನರು ಓಡಾಡಲು ತುಂಬಾ ತೊಂದರೆಯಾಗುತ್ತಿರುವುದನ್ನು ತಿಳಿಸಿದರು. | ತೋಟಗಾರಿಕೆ ಇಲಾಖೆಯವರಿಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗುವುದು. | ತೋಟಗಾರಿಕೆ ಇಲಾಖೆ, ಯಲಹಂಕ |
| 3 | ವೈಟ್ ಟಾಪ್ಪಿಂಗ್ ರಸ್ತೆಯಲ್ಲಿ ಮಳೆಯ ನೀರು ರಸ್ತೆಯ ಮೇಲೆ ಹರಿದು ಬರುತ್ತಿರುತ್ತಿರುವುದರ ಬಗ್ಗೆ ತಿಳಿಸಿದರು. | ಸಹಾಯಕ ಅಭಿಯಂತರರು, ಯೋಜನಾ ವಿಭಾಗ ರವರಿಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗುವುದು. | ಸ.ಕಾ.ಅ ಪ್ರಾಜೆಕ್ಸ್, ಯಲಹಂಕ |
| 4 | ರಾಜೀವ್ ಗಾಂಧಿ ಪಾರ್ಕ್ ಮತ್ತು ನಾಡ ಪ್ರಭು ಕೆಂಪೇಗೌಡ ಪಾರ್ಕ್‌ಗಳಲ್ಲಿ ನೀರು ನಿಂತು ಓಡಾಡಲು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿರುತ್ತಾರೆ. | ತೋಟಗಾರಿಕೆ ಇಲಾಖೆಯವರಿಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗುವುದು. | ತೋಟಗಾರಿಕೆ ಇಲಾಖೆ, ಯಲಹಂಕ |
| 5 | ನಾಡಪ್ರಭು ಕೆಂಪೇಗೌಡ ಪಾರ್ಕ್‌ನಲ್ಲಿ ಫೌಂಟನ್ ವರ್ಕ್ ಆಗದೇ ಇರುವ ಬಗ್ಗೆ ತಿಳಿಸಿರುತ್ತಾರೆ. | ತೋಟಗಾರಿಕೆ ಇಲಾಖೆಯವರಿಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗುವುದು. | ತೋಟಗಾರಿಕೆ ಇಲಾಖೆ, ಯಲಹಂಕ |
| 6 | ಮನೆಗಳ ಛಾವಣಿಗಳ ಮೇಲೆ ಮರದ ಕೊಂಬೆಗಳು ಬಹಳಷ್ಟು ಇದ್ದು, ಇದನ್ನು ತೆಗೆಯಲು ಕ್ರೇನ್ ಇಲ್ಲದೇ ಇರುವ ಬಗ್ಗೆ ಶ್ರೀ.ವಿಜಯ್ ಕುಮಾರ್ ರವರು ತಿಳಿಸಿರುತ್ತಾರೆ. | ವಲಯ ಅರಣ್ಯಾಧಿಕಾರಿ, ಯಲಹಂಕ ವಲಯ ರವರಿಗೆ ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗುವುದು. | ವಲಯ ಅರಣ್ಯಾಧಿಕಾರಿ, ಯಲಹಂಕ ವಲಯ |
| 7 | ಶ್ರೀ.ವಿಜಯ್ ಕುಮಾರ್ ಕೆಲವು ಮನೆಗಳ ಮೇಲೆ ತೆಂಗಿನ ಗರಿಗಳು ಮತ್ತು ಮರದ ರೆಂಬೆಗಳು ಬಿದ್ದಿದ್ದು, ಅದನ್ನು ತೆರವುಗೊಳಿಸಲು ತಿಳಿಸಿರುತ್ತಾರೆ. | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ:05 ರವರಿಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗುವುದು. | ಸ.ಕಾ.ಅ ಎಸ್.ಡಬ್ಲ್ಯು.ಎಂ |
| 8 | ಎನ್.ಇ.ಎಸ್ ಬಸ್‌ಸ್ಟಾಪ್‌ನ ಸಿಗ್ನಲ್ ಲೈಟ್ ಕಾರ್ಯನಿರ್ವಹಿಸದ ಕಾರಣ ಇಬ್ಬರು ಪೋಲೀಸ್‌ರನ್ನು ಟ್ರಾಫಿಕ್ ನಿರ್ವಹಿಸಲು ಸಭೆಯಲ್ಲಿ ಶ್ರೀ.ವಿಜಯ್ ಕುಮಾರ್ ರವರು ಪ್ರಸ್ತಾಪಿಸಿರುತ್ತಾರೆ. | ಟ್ರಾಫಿಕ್ ಪೋಲೀಸ್, ಯಲಹಂಕ ರವರಿಗೆ ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗುವುದು. | ಟ್ರಾಫಿಕ್ ಪೋಲೀಸ್ ಇಲಾಖೆ, ಯಲಹಂಕ |
| 9 | ಬಿ.ಬಿ.ಎಂ.ಪಿ ಕಛೇರಿ ಮುಂಭಾಗದಲ್ಲಿರುವ ಹಳೆಯ ಬಟ್ಟೆಗಳನ್ನು ಜೋಡಿಸಿರುವ ಸ್ಟಾಂಡ್‌ನ್ನು ಮತ್ತು ಎನ್.ಇ.ಎಸ್ ಬಸ್ ನಿಲ್ದಾಣದ ಎದುರು ಇರುವ ಬಟ್ಟೆಗಳ ಸ್ಟಾಂಡ್‌ನ್ನು ಬೇರೆ ಕಡೆ ಬದಲಾಯಿಸಲು ತಿಳಿಸಿರುತ್ತಾರೆ. | ಸ.ಅ, ಯ.ಉ.ಉ.ವಿ ರವರಿಗೆ ತೆರವು ಗೊಳಿಸಲು ಸಭೆಯಲ್ಲಿ ಸೂಚಿಸಿರುತ್ತಾರೆ. | ಸ.ಕಾ.ಅ ಯ.ಉ.ಉ.ವಿ |
| 10 | ಆರ್.ಟಿ.ಓ ಕಾಂಪ್ಲೆಕ್ಸ್ ಎದುರು ಇರುವ ಜಾಗಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೌಸಿಂಗ್ ಬೋರ್ಡ್‌ರವರ ವಶದಲ್ಲಿರುತ್ತದೆ. ಸದರಿ ಜಾಗವನ್ನು ಬಿ.ಬಿ.ಎಂ.ಪಿ ರವರಿಗೆ ವಹಿಸಿದಲ್ಲಿ ಅದರಿಂದ ಬರುವ ತೆರಿಗೆಯಿಂದ ಜಾಗದ ನಿರ್ವಹಣೆಯನ್ನು ಮಾಡಲು ಸೂಚಿಸಿರುತ್ತಾರೆ. | ಸಹಾಯಕ ಕಂದಾಯ ಅಧಿಕಾರಿ, ಯಲಹಂಕ ಉಪನಗರ ಉಪವಿಭಾಗ ರವರಿಗೆ ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗುವುದು. | ಸ.ಕಂ.ಅ ಯಲಹಂಕ ಉಪನಗರ |

| | | | |
|---|---|---|---|
| 11 | ಮಾತೃಬಡಾವಣೆಯ 2ನೇ ಕ್ರಾಸ್‌ನಲ್ಲಿ ಪಾಟ್‌ಹೋಲ್‌ಗಳು ಬಿದ್ದಿದ್ದು, ಅದನ್ನು ಸರಿಪಡಿಸಿಕೊಡಲು ತಿಳಿಸಿರುತ್ತಾರೆ. | ಸ.ಅ, ಯ.ಉ.ಉ.ವಿ ರವರಿಗೆ ತೆರವುಗೊಳಿಸಲು ಸಭೆಯಲ್ಲಿ ಸೂಚಿಸಿರುತ್ತಾರೆ. | ಸ.ಕಾ.ಅ ಯ.ಉ.ಉ.ವಿ |
| 12 | ಮಾತೃ ಬಡಾವಣೆಯಲ್ಲಿ ಡ್ರೈವೇಸ್ಟ್ ರವರು ಕಸವನ್ನು ಸರಿಯಾಗಿ ತೆಗೆಯದೇ ಇರುವ ಬಬಗ್ಗೆ ತಿಳಿಸಿರುತ್ತಾರೆ. | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ:05 ರವರಿಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗುವುದು. | ಸ.ಕಾ.ಅ ಎಸ್.ಡಬ್ಲ್ಯು.ಎಂ |
| 13 | 7ನೇ ಬಿ ಮುಖ್ಯರಸ್ತೆಯಲ್ಲಿ ಹೊಸದಾಗಿ ಸ್ಯಾನಿಟರಿ ಲೈನ್ ಅಳವಡಿಸಿದ್ದು, ರಸ್ತೆ ಕುಸಿದಿರುವುದರಿಂದ ಸರಿಪಡಿಸಲು ಬಿ.ಡಬ್ಲ್ಯು.ಎಸ್.ಎಸ್.ಬಿ ರವರಿಗೆ ಸಭೆಯಲ್ಲಿ ತಿಳಿಸಿರುತ್ತಾರೆ. | ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ ರವರು ಇದರ ಬಗ್ಗೆ ಸೂಕ್ತ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. | ಸ.ಕಾ.ಅ ಬಿ.ಡಬ್ಲ್ಯುಎಸ್ಎಸ್‌ಬಿ |
| 14 | ಬಸವಲಿಂಗಪ್ಪ ಪಾರ್ಕ್‌ನ ಮುಖ್ಯರಸ್ತೆಯಲ್ಲಿ ಹೊಸದಾಗಿ ಸ್ಯಾನಿಟರಿ ಲೈನ್‌ನ್ನು ಅಳವಡಿಸಲು ತಿಳಿಸಿರುತ್ತಾರೆ. | ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ ರವರು ಇದರ ಬಗ್ಗೆ ಸೂಕ್ತ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. | ಸ.ಕಾ.ಅ ಬಿ.ಡಬ್ಲ್ಯುಎಸ್ಎಸ್‌ಬಿ |

**ಸದಸ್ಯ ಕಾರ್ಯದರ್ಶಿ**
**ವಾರ್ಡ್ ನಂ:05**
**ಯಲಹಂಕ ಸ್ಯಾಟಲೈಟ್ ಟೌನ್**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ನೋಡಲ್ ಅಧಿಕಾರಿ,**
**ವಾರ್ಡ್ ನಂ:05**
**ಯಲಹಂಕ ಸ್ಯಾಟಲೈಟ್ ಟೌನ್**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಪ್ರತಿಯನ್ನು:-

1) ಮಾನ್ಯ ಜಂಟಿ ಆಯುಕ್ತರು ಬಿ.ಬಿ.ಎಂ.ಪಿ, ಯಲಹಂಕ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
3) ನೋಡಲ್ ಅಧಿಕಾರಿ, ವಾರ್ಡ್ ನಂ:05, ಯಲಹಂಕ ಉಪನಗರ, ಯಲಹಂಕ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ / ಯೋಜನಾ ವಿಭಾಗ / ರಸ್ತೆ ಮೂಲಭೂತ ಸೌಕರ್ಯ / ಕೆರೆ ಅಭಿವೃದ್ಧಿ / ವಿದ್ಯುತ್ ವಿಭಾಗ / ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
5) ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯು.ಡಿ, ಯಲಹಂಕ ವಿಭಾಗ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಕೋಶ, ವಾರ್ಡ್ ನಂ:04 ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ / ಬಿ.ಡಬ್ಲ್ಯು.ಎಸ್.ಎಸ್.ಬಿ ಯಲಹಂಕ ಉಪನಗರ ರವರಿಗೆ ಸೂಕ್ತ ಕ್ರಮಕ್ಕಾಗಿ.
9) ಪಶುಪಾಲನಾ ವಿಭಾಗ, ಬಿ.ಬಿ.ಎಂ.ಪಿ, ಯಲಹಂಕ ವಲಯ ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
10) ಕಛೇರಿ ಕಡತಕ್ಕೆ.